Sl. No.	Sch. No.	Route		Class of Service	Sch. Kms.
		From	To		
13	39	Kadur	Birur-Dasaratti	-do-	252
14	28	Kadur	Yagati-Halebeedu	Express	322
15	1-18	Kadur	Chickmagalur-Mysore	-do-	776
16	2-3	Kadur	Chickmagalur-Hospet	-do-	804
17	11	Kadur	Chickmagalur-Mysore	-do-	450
18	22-23	Kadur	Panchanahalli-Dharmasthala	-do-	747
19	24	Kadur	Panchanahalli-Bangalore	-do-	572
20	25	Kadur	Chickmagalur-Bangalore	-do-	570
21	30-31	Kadur	Chickmagalur-Hospet	-do-	704
22	36-37	Kadur	Sakaleshpur-Bangalore	-do-	657
23	32-33	Kadur	Mysore-Chickmagalur	-do-	822
24	26	Kadur	Chickmagalur-Mysore	-do-	450

ರಾಜ್ಯದಲ್ಲಿ ಖಾಸಗಿ ಕಂಪನಿಗಳು ವಿದ್ಯುತ್ ಸ್ಥಾವರ ಸ್ಥಾಪಿಸುವುದು

4430 (5056) : ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಎಷ್ಟು ವಿದ್ಯುತ್ ಕಂಪೆನಿಗಳು ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲು ಮುಂದೆ ಬಂದಿರುತ್ತವೆ; ಹಾಗೂ ಪರವಾನಿಗೆ ಪಡೆದಿರುತ್ತವೆ;

ಆ) ಪರವಾನಿಗೆ ಪಡೆದ ವಿದ್ಯುತ್ ಕಂಪನಿಗಳಲ್ಲಿ ಎಷ್ಟು ವಿದ್ಯುತ್ ಖಾಸಗಿ ಕಂಪನಿಗಳು ವಸ್ತುಶಃ ಮುಚ್ಚಿರುತ್ತವೆ; ಇವುಗಳ ಸ್ಥಾಪನಾ ವೆಚ್ಚದಿಂದ ಸದರಿ ಖಾಸಗಿ ಕಂಪನಿಗಳಿಗೆ ಅಂದಾಜು ಎಷ್ಟು ನಷ್ಟವಾಗಿದೆ; ಇದಕ್ಕೆ ಕಾರಣಗಳೇನು; ವಿವರ ನೀಡುವುದು;

ಇ) ಖಾಸಗಿ ವಿದ್ಯುತ್ ಕಂಪನಿಗಳನ್ನು ಸ್ಥಾಪಿಸಲು ಸರ್ಕಾರವು ಉತ್ತೇಜನ ನೀಡುತ್ತಿಲ್ಲವೆ; ಹಾಗು ಖಾತರಿ ನೀಡುತ್ತಿಲ್ಲವೆ; ನೀಡಿದ್ದಲ್ಲಿ ವಿವರ ನೀಡುವುದು?

ಶ್ರೀ ಬಸವರಾಜ ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ರಾಜ್ಯದಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಅಸಂಪ್ರದಾಯಿಕ ಇಂಧನ ಮೂಲಗಳ ವಿದ್ಯುತ್ ಕಂಪನಿಗಳು ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲು ಪರವಾನಿಗೆ ಪಡೆದಿರುವ ವಿವರ ಈ ರೀತಿ ಇದೆ:

ಪವನ–127, ಕಿರುಜಲ–174, ಸಹ ಉತ್ಪಾದನೆ–45 ಜೈವಿಕ–63.

ಆ) ಅಸಂಪ್ರದಾಯಿಕ ವಿದ್ಯುತ್ ಕಂಪೆನಿಗಳು ಯಾವುವು ಮುಚ್ಚಿರುವುದಿಲ್ಲ. ಯಾವುದೇ ಖಾಸಗಿ ಕಂಪನಿಗಳಿಗೆ ನಷ್ಟವಾಗಿರುವುದಿಲ್ಲ. ಇದಲ್ಲದೆ ಬೃಹತ್ ಖಾಸಗಿ ಉತ್ಪಾದನಾ ಸಂಸ್ಥೆಯಾದ ಜಿಂದಾಲ್, ತಣ್ಣೀರು ಬಾವಿ, ರಾಯಲಸೀಮಾ ಹಾಗೂ ಟಾಟಾ ಸಂಸ್ಥೆಗಳೂ ಸಹ ವಿದ್ಯುತ್ ಉತ್ಪಾದನಾ ಕ್ಷೇತ್ರದಲ್ಲಿ ಬೃಹತ್ ವಾಣಿಜ್ಯ ಸಂಸ್ಥೆಗಳಾಗಿದ್ದು ಯಾವುದೇ ನಷ್ಟವನ್ನು ಅನುಭವಿಸಿರುವುದಿಲ್ಲ.

ಇ) ಖಾಸಗಿ ವಿದ್ಯುತ್ ಕಂಪನಿಗಳನ್ನು ಸ್ಥಾಪಿಸಲು ಸರ್ಕಾರವು ಉತ್ತೇಜನ ನೀಡುತ್ತಿದೆ. ವಿವರಗಳು ಈ ರೀತಿ ಇವೆ:

ಎ. ಅಸಂಪ್ರದಾಯಕ ವಿದ್ಯುತ್ ಘಟಕಗಳನ್ನು ಸ್ಥಾಪಿಸಲು ಖಾಸಗಿ ಅಭಿವೃದ್ಧಿದಾರರಿಗೆ ಸಾಮರ್ಥ್ಯವನ್ನು ಹಂಚಿಕೆ ಮಾಡಲಾಗುತ್ತಿದೆ.

ಬಿ. ಅಸಂಪ್ರದಾಯಕ ಇಂಧನ ಮೂಲಗಳಿಂದ ಖಾಸಗಿ ಕಂಪನಿಯವರು ಉತ್ಪಾದಿಸಿದ ವಿದ್ಯುತ್ತನ್ನು ಕೆ.ಪಿ.ಟಿ.ಸಿ.ಎಲ್.ನ ವಿದ್ಯುತ್ ಜಾಲವನ್ನು (ಗ್ರಿಡ್) ಉಪಯೋಗಿಸಿ ಮೂರನೆ ವ್ಯಕ್ತಿಗೆ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಸಿ. ಸಹ ಉತ್ಪಾದನಾ ಘಟಕ ಸ್ಥಾಪಿಸಿದ ಸಕ್ಕರೆ ಕಾರ್ಖಾನೆಗಳಿಗೆ ಕೆ.ಪಿ.ಟಿ.ಸಿ.ಎಲ್.ನ ಜಾಲಕ್ಕೆ ಸರಬರಾಜು ಮಾಡಿದ ಪ್ರತಿ ಮೆ.ವ್ಯಾ.ಗೆ ರೂ. 25 ಲಕ್ಷದಂತೆ ಸಹಾಯಧನ ನೀಡಲಾಗುತ್ತಿದೆ. ಇದು 31.03.2004 ರವರೆಗೆ ಜಾರಿಯಲ್ಲಿರುತ್ತದೆ.

ಡಿ. ಕೆ.ಪಿ.ಟಿ.ಸಿ.ಎಲ್.ನವರು ತಮ್ಮ ಜಾಲಕ್ಕೆ ಸರಬರಾಜು ಮಾಡಿದ ವಿದ್ಯುತ್ತಿನ ದರವನ್ನು ಈ ರೀತಿ ನಿಗದಿ ಪಡಿಸಿದ್ದಾರೆ:

ಪವನ.

1. ಪ್ರತಿ ಯೂನಿಟ್ ಗೆ ವಾರ್ಷಿಕ 2% ವೃದ್ಧಿಯೊಂದಿಗೆ (ಬೇಸಿಕ್ ದರದ ಮೇಲೆ) ರೂ. 3.25 (31.08.2003 ರೊಳಗೆ ವಿದ್ಯುತ್ ಉತ್ಪಾದನೆ ಪ್ರಾರಂಭಿಸಿದ ಕಂಪನಿಗಳಿಗೆ)
2. 31.08.2003ರ ನಂತರ ವಿದ್ಯುತ್ ಉತ್ಪಾದನೆ ಪ್ರಾರಂಭಿಸಿದ ಕಂಪನಿಗಳಿಗೆ ಪ್ರತಿ ಯೂನಿಟ್‌ಗೆ ವಾರ್ಷಿಕ 2% ವೃದ್ಧಿಯೊಂದಿಗೆ (ಬೇಸಿಕ್ ದರದ ಮೇಲೆ) ರೂ. 3.10

ಜೈವಿಕ :

ಪ್ರತಿ ಯೂನಿಟ್‌ಗೆ ವಾರ್ಷಿಕ 2% ವೃದ್ಧಿಯೊಂದಿಗೆ (ಬೇಸಿಕ್ ದರದ ಮೇಲೆ) ರೂ. 2.80 ಈ ದರಗಳಿಗೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ (ಕೆ.ಇ.ಆರ್.ಸಿ.) ಮಂಜೂರಾತಿ ಪಡೆಯಬೇಕಾಗಿದೆ.

ಕಿರು ಜಲ ಮತ್ತು ಸಹ ಉತ್ಪಾದನಾ ವಿದ್ಯುತ್ ಸ್ಥಾವರಗಳಿಗೆ ಇನ್ನು ದರವನ್ನು ನಿಗದಿ ಪಡಿಸಬೇಕಿದೆ.

ರಾಯಚೂರಿನ ವಿದ್ಯುತ್ ಉತ್ಪಾದನಾ ಕೇಂದ್ರದಿಂದ ಹಾರುವ ಬೂದಿಯನ್ನು ನಿಯಂತ್ರಿಸುವುದು

4431 (5101) : ಶ್ರೀ ಲಕ್ಷ್ಮೀನಾರಾಯಣ ಎಂ.ಡಿ. (ತುರುವೇಕೆರೆ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಯಚೂರಿನ ಶಾಖೋತ್ಪನ್ನ ವಿದ್ಯುತ್ ಘಟಕದ ಉತ್ಪಾದನಾ ಕೇಂದ್ರದಿಂದ ಹಾರುವ ವಿಷಕಾರಕ ಹಾರು ಬೂದಿಯ ನಿಯಂತ್ರಣಕ್ಕೆ ಯಾವ ಮುಂಜಾಗ್ರತಾ ಕ್ರಮವನ್ನು ಕೈಗೊಳ್ಳಲಾಗಿದೆ.

ಆ) ಈ ನೀರು ಮತ್ತು ಬೂದಿ ನೇರವಾಗಿ ನದಿಯ ನೀರನ್ನು ಸೇರುತ್ತಿರುವುದರಿಂದ ಪರಿಸರಕ್ಕೆ ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.